ಅದಕ್ಕೆ ಸರ್ಕಾರ ಏನಾದರೂ ಒಂದು ನಿರ್ಧಾರಕ್ಕೆ ಬಂದು ಚುನಾವಣೆಯನ್ನು ಮಾಡುತ್ತೇವೆಂದು ಹೇಳಬೇಕಲ್ಲಾ.

ಉಪಾಧ್ಯಕ್ಷಣಿಯವರು : ಅವರು ಏನು ಉತ್ತರ ಕೊಡಬೇಕೋ ಅದನ್ನು ಕೊಟ್ಟಿದ್ದಾರೆ.

ಜಲಮಾಲಿನ್ಯ ನಿವಾರಣೆ ಬಗ್ಗೆ ಮಂಡಿಸಿರುವ ಶಾಸನಾತ್ಮಕ ನಿರ್ಣಯದ ಮೇಲೆ ಚರ್ಚೆ :

+ ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ) : ಮಾನ್ಯ ಉಪಾಧ್ಯಕ್ಷಣಿಯವರೆ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವಂತಹ ಶಾಸನಾತ್ಮಕ ನಿರ್ಣಯ. ಏನಿದೆ ರಾಜ್ಯದಲ್ಲಿ ಜಲಮಾಲಿನ್ಯವನ್ನು ತಡೆಗಟ್ಟಲಿಕ್ಕೆ ನಿಯಂತ್ರಣ ಹಾಗೂ ಶುದ್ಧ ಜಲವನ್ನು ಯಥಾಸ್ಥಿತಿಯಲ್ಲಿರುವ ಹಾಗೂ ಉಳಿಸಿಕೊಂಡು ಬರುವುದಕ್ಕೆ ಸಂಬಂಧಿಸಿದಂತಹ ಜನಮಾಲಿನ್ಯ ನಿವಾರಣೆ ಹಾಗೂ ಅಧಿನಿಯಮ ಏನಿದೆ ಅದಕ್ಕೆ ತಿದ್ದುಪಡಿಯನ್ನು ಈಗಾಗಲೇ ತಂದಿದ್ದಾರೆ. ಆ ತಿದ್ದುಪಡಿಯನ್ನು ರಾಜ್ಯ ಸರ್ಕಾರವು ಸಹ ಅಂಗೀಕರಿಸಬೇಕೆಂದು ಈ ಸದನ ಈಗ ನಿರ್ಣಯಿಸಬೇಕಾಗಿದೆ. ಈ ಒಂದು ನಿರ್ಣಯವನ್ನು ಹಿಂದೆ ಮಂಡಿಸಿದಾಗ ನಾವು ಕೆಲವು ಆಕ್ಷೇಪಗಳು ಎತ್ತಿದ್ದೆವು. ಮಾನ್ಯ ಸಚಿವರು ನಮ್ಮ ಆಕ್ಷೇಪಣೆಗಳನ್ನು ಒಪ್ಪಿಕೊಂಡು, ಸಂಬಂಧಪಟ್ಟ ವಿಧೇಯಕದ ಪ್ರತಿಯನ್ನು ಹಾಗೂ ಈ ಬಗ್ಗೆ ಲೋಕಸಭೆಯಲ್ಲಿ ಚರ್ಚೆಯಾದಂತಹ ನಡವಳಿಕೆಯ ಪ್ರತಿಯನ್ನೂ ಸಹ ಕಳುಹಿಸಿದ್ದಾರೆ. ಅದಕ್ಕೆ ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈಗ ಇದರ ಬಗ್ಗೆ ಕೆಲವೇ ನಿಮಿಷಗಳಲ್ಲಿ ಹೇಳಲಿಕ್ಕೆ ಸಾಧ್ಯವಿಲ್ಲ. ಸ್ವಲ್ಪ ಹೆಚ್ಚು ವಿಚಾರವನ್ನು ಪ್ರಸ್ತಾವ ಮಾಡಬೇಕಾಗಿದೆ. ಅದನ್ನು ಮಾನ್ಯ ಮಂತ್ರಿಗಳೂ ಸಹ ಬಯಸುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ರಾಷ್ಟ್ರದಲ್ಲಿ ಮೂರು ಮುಖ್ಯವಾದಂತಹ ಮಾಲಿನ್ಯ ನಿವಾರಣೆ ಮತ್ತು ತಡೆಗಟ್ಟಲಿಕ್ಕೆ ಸಂಬಂಧಪಟ್ಟಂತೆ ಮೂರು ವಿಧೇಯಕಗಳು ಇವೆ. ಮೊಟ್ಟಮೊದಲನೆಯದಾಗಿ, ಪರಿಸರವನ್ನು ಸಂರಕ್ಷಣೆ ಮಾಡಲಿಕ್ಕೆ Environment Protection Act ಏನಿದೆ ಅದು ಈಗಾಗಲೇ ಜಾರಿಯಲ್ಲಿದೆ. Air Prevention & Control of Pollution Act ಈಗಾಗಲೇ ಜಾರಿಯಲ್ಲಿದೆ. ಅದೇ ರೀತಿಯಾಗಿ ಜನಮಾಲಿನ್ಯ ನಿವಾರಣೆಯ ಹಾಗೂ ನಿಯಂತ್ರಣ ಕಾನೂನು ಸಹ ಜಾರಿಯಲ್ಲಿದೆ. ಈ ಮೂರು ವಿಧೇಯಕಗಳ ಮೂಲ ಉದ್ದೇಶ ಒಂದೇ ನಮ್ಮಲ್ಲಿ ಆಗುವಂತಹ ಮಾಲಿನ್ಯವನ್ನು ತಪ್ಪಿಸಬೇಕು, ಮತ್ತು ಇದರಿಂದ ತೊಂದರೆಗೆ ಒಳಗಾದಂತಹ ಜನರನ್ನು ತೊಂದರೆಯಿಂದ ತಪ್ಪಿಸಬೇಕೆಂಬುದು ಆಗಿರುತ್ತದೆ. ಈ ಉದ್ದೇಶವನ್ನು ಕಂಡುಕೊಂಡು 1974ರಲ್ಲಿ ಸಂವಿಧಾನದ 252 ಅನುಚ್ಛೇದದ ಪ್ರಾಕರ ಜಾರಿಗೆ ಬಂತು. ಆಗ ಎರಡ ರಾಜ್ಯಗಳಿಗಿಂತ ಹೆಚ್ಚಾಗಿ ಇಂತಹ ಒಂದು ಅಧಿನಿಯವನ್ನು ರಚಿಸಬೇಕು ಮತ್ತು ಜಾರಿಗೆ ತರಬೇಕೆಂದು ವಿನಂತಿಸಿಕೊಂಡಿದ್ದರ ಮೇಲೆ ಈ ಅಧಿನಿಯಮ ಜಾರಿಗೆ ಬಂತು.

1988ರಲ್ಲಿ ಕೆಲವೊಂದು ರಾಜ್ಯಗಳು ಈ ಬಗ್ಗೆ ಇರುವಂಥ ತೊಂದರೆಗಳನ್ನು ನಿವಾರಣೆ ಮಾಡುವುದಕ್ಕೆ, ಅಡಳಿತಾತ್ಮಕವಾದ ತೊಂದರೆಗಳನ್ನು ನಿವಾರಣೆ ಮಾಡುವುದಕ್ಕೆ ತಿದ್ದುಪಡಿ ಬೇಕೆಂದು ಸೂಚನೆ ಮಾಡಿದ್ದದರಿಂದ ಕೇಂದ್ರ ಸರ್ಕಾರ 1988 ರ ಕೇಂದ್ರದ ಅಧಿನಿಯಮದ ಮುಖಾಂತರ ಕೆಲವು ತಿದ್ದುಪಡಿಗಳನ್ನು ಜಾರಿಗೆ ತಂದರು. 1988ರಲ್ಲಿ ಜಾರಿಗೆ ಬಂದಾಗ್ಯೂ ಸಹ, ಮೂರು ವರ್ಷಗಳ ಕಾಲ ಕರ್ನಾಟಕ ರಾಜ್ಯ ಸರ್ಕಾರ ಸದರಿ ತಿದ್ದುಪಡಿ ವಿಧೇಯಕವನ್ನು

ಅಂಗೀಕರಿಸುವುದಕ್ಕೆ ತುರ್ತಾಗಿ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಿಲ್ಲ, ಇಂಥ ಒಂದು ಪ್ರಾಮುಖ್ಯವಾದಂಥ ತಿದ್ದುಪಡಿ ಅಧಿನಿಯಮವನ್ನು ಜಾರಿಗೊಳಿಸಲು ನಮ್ಮ ಸರ್ಕಾರ ಏಕೆ ಹಿಂದೇಟು ಹಾಕಿತು? ಅದಕ್ಕೆ ಮೂರು ವರ್ಷಗಳ ಅವಧಿ ಬೇಕಿತ್ತೇ? 1988ರಲ್ಲಿ ತಿದ್ದುಪಡಿ ವಿಧೇಯಕವನ್ನು ಪಾರ್ಲಿಮೆಂಟ್ ಅಂಗೀಕರಿಸಿತು. ಅಂಗೀಕರಿಸಿದ ಮೇಲೆ ಆ ಒಂದು ತಿದ್ದುಪಡಿ ಅಧಿನಿಯಮವನ್ನು ಕರ್ನಾಟಕ ರಾಜ್ಯದಲ್ಲಿ ಜಾರಿಗೆ ತರಲಿಕ್ಕೆ ಒಂದು ನಿರ್ಣಯವನ್ನು ಈ ಶಾಸನ ಸಭೆ ಮುಂದಿಡಲು ತಮಗೆ ಮೂರು ವರ್ಷಗಳು ಬೇಕಿತ್ತೇ ಎಂಬುದನ್ನು ಮಂತ್ರಿಗಳಾದ ಮಾನ್ಯ ಬಸವಲಿಂಗಪ್ಪನವರು ಹೇಳಬೇಕೆಂದು ಕೇಳುತ್ತೇನೆ. ಇದರ ಬಗ್ಗೆ ನಿಜವಾದ ನಿಷ್ಠೆ ಕಳಕಳಿ ಇದ್ದಿದ್ದರೆ, ಅದನ್ನು ಮೊದಲೇ ತರಬೇಕಿತ್ತು. ಮತ್ತು ಇದನ್ನು ಜಾರಿ ಮೊದಲು ಕ್ರಮವನ್ನು ತೆಗೆದುಕೊಳ್ಳಬೇಕಿತ್ತು ಎಂದು ನಾನು ಭಾವಿಸಿದ್ದೇನೆ. ಈ ಒಂದು ತಿದ್ದುಪಡಿ ಏನಿದೆ ಇದು ಬಹಳ ಮಹತ್ವಪೂರ್ಣವಾದುದೆಂದು ನಾನೂ ಒಪ್ಪುತ್ತೇನೆ ಮತ್ತು ಎಲ್ಲಾ ತಿದ್ದುಪಡಿಯನ್ನು ನಾನು ಸ್ವಾಗತ ಮಾಡುತ್ತೇನೆ. ಇದರ ಜೊತೆಗೆ ಕೆಲವು ಪ್ರಾಮುಖ್ಯವಾದಂತಹ ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರಲಿಚ್ಚಿಸುತ್ತೇನೆ. ಮೊದಲು ಜಲ ಮತ್ತು ವಾಯು ಮಾಲಿನ್ಯಕ್ಕೆ ಸಂಬಂಧಪಟ್ಟಂತೆ ಒಂದೇ ಮಂಡಳಿ ಇರಲಿಲ್ಲ, ಈ ಒಂದು ತಿದ್ದುಪಡಿ ಮುಖಾಂತರ, ಒಂದೇ ಒಂದು ಮಂಡಳಿಯನ್ನು, ಅದು ಕೇಂದ್ರದ ಮಂಡಳಿ ಇರಬಹುದು, ರಾಜ್ಯದ ಮಂಡಳಿ ಇರಬಹುದು, ಅಂಥದ್ದನ್ನು ಅಸ್ತಿತ್ವಕ್ಕೆ ತರಲು ಪ್ರಯತ್ನ ಮಾಡಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಹಿಂದೆ ರಾಜ್ಯ ಮಂಡಳಿಗೆ ದೂರುಗಳು ಬಂದಾಗ ಕ್ರಮವನ್ನು ತೆಗೆದುಕೊಳ್ಳದಿದ್ದರೆ, ಪರಿಣಾಮಕಾರಿಯಾಗಿ ಕೇಂದ್ರದ ಮಂಡಳಿಯಾಗಲೀ, ಅಥವಾ ಕೇಂದ್ರ ಸರ್ಕಾರವಾಗಲೀ ಇದರ ಬಗ್ಗೆ ಸೂಚನೆ ಕೊಡುವ ಅಧಿಕಾರ ಇರಲಿಲ್ಲ, ಈಗ ಅಂತಹ ಸೂಚನೆ ಕೊಡುವಂಥ ಅಧಿಕಾರವನ್ನು ಈ ತಿದ್ದುಪಡಿ ಮುಖಾಂತರ ತೆಗೆದುಕೊಂಡಿದ್ದಾರೆ. ಇದು ಏತಕ್ಕೋಸ್ಕರ ಉದ್ಭವಿಸಿತು? ರಾಜ್ಯ ಜಲಮಾಲಿನ್ಯ ಮಂಡಳಿ ಏನಿದೆ, ಪೊಲ್ಯೂಷನ್ ಕಂಟ್ರೋಲ್ ಬೋರ್ಡ್ ಏನಿವೆ, ಇವು ಸರಿಯಾಗಿ ಕೆಲಸ ಮಾಡುತ್ತಿರಲಿಲ್ಲ. 1974 ರಿಂದ 1988ರವರೆಗೆ ಇಡೀ ರಾಜ್ಯದಲ್ಲಿ ಒಟ್ಟು ಸುಮಾರು 900 ಕೇಸ್‌ಗಳು ಪೆಂಡಿಂಗ್ ಉಳಿದಿತ್ತು. ಒಂದು ವರ್ಷದಲ್ಲಿ ಅಂದರೆ 1988ರ ನಂತರ 1000 ಹೆಚ್ಚು ದೂರುಗಳನ್ನು ಈ ಮಾಲಿನ್ಯ ಮಂಡಳಿ ಪರಿಶೀಲನೆ ಮಾಡಿದೆ. ಸುಮಾರು 13 ವರ್ಷಗಳಿಗೂ ಹೆಚ್ಚು ಇದ್ದಾಗ್ಯೂ ಸಹ, ಜನ ಜಾಗೃತಗೊಂಡು ಸಂಬಂಧಪಟ್ಟ ಮಾಲಿನ್ಯಕ್ಕೆ ಕಾರಣರಾದ ಜನರ ಮೇಲೆ ಅಥವಾ ಸಂಸ್ಥೆಗಳ ಮೇಲೆ ಯಾವುದೇ ಕ್ರಮವನ್ನು ತೆಗೆದುಕೊಳ್ಳುವಂಥ ಒಂದು ಪ್ರವೃತ್ತಿ ಬೆಳೆಯಲಿಲ್ಲ. ಅದು ಏತಕ್ಕೋಸ್ಕರ ಆಯಿತು? ಅನೇಕ ಸಂದರ್ಭಗಳಲ್ಲಿ ಇಂಥ ಮಂಡಳಿಗೆ ದೂರು ನೀಡಿದಾಗ, ಸರ್ಕಾರಕ್ಕೆ ದೂರನ್ನು ನೀಡಿದಾಗ, ಆ ಮಂಡಳಿಯವರು ಯಾವುದೇ ಕ್ರಮವನ್ನು ತೆಗೆದುಕೊಳ್ಳದೇ ಇರುವ ಒಂದು ಪ್ರವೃತ್ತಿಯನ್ನು ಕಂಡು ಜನರು ಮುಂದೆ ಬರಲಿಲ್ಲ, ಸರ್ಕಾರ ತಾನಾಗಿಯೇ ಕ್ರಮವನ್ನು ತೆಗೆದುಕೊಳ್ಳಲಿಲ್ಲ, ಇಂಥ ಅಶುದ್ಧವಾದ, ಕೊಳಚೆಯಾದ ನೀರು ಇಂಥ ಕಾರ್ಖಾನೆಗಳಿಂದ ಹೊರ ಬಂದಾಗ ಪರಿಸ್ಥಿತಿ ಏನಾಗುತ್ತದೆ? ಕುಡಿಯುವ ನೀರಿಗೆ ತೊಂದರೆಯಾಗುತ್ತದೆ. ವ್ಯವಸಾಯಕ್ಕೆ ಯೋಗ್ಯವಾದ ಭೂಮಿ ಅಯೋಗ್ಯವಾಗುತ್ತದೆ. ಒಂದು ಉದಾಹರಣೆಯನ್ನು ಕೊಡುವುದಕ್ಕೆ ಬಯಸುತ್ತೇನೆ. ತಮಗೆ ಗೊತ್ತಿದೆ. ಹರಿಹರದಲ್ಲಿ ಫಾಲಿಫೈಬರ್ಸ್ ಎಂದು ಒಂದು ಕಾರ್ಖಾನೆ ಇದೆ. ಈ ಕಾರ್ಖಾನೆಯಿಂದ ಹೊರಗೆ ಹೋಗುವ ನೀರನ್ನು ಯಾರೂ ಕುಡಿಯುವುದಕ್ಕೆ ಉಪಯೋಗಿಸುವುದಕ್ಕೆ ಆಗುವುದಿಲ್ಲ. ಇದನ್ನು ನೀರಾವರಿಗೂ

ಉಪಯೋಗಿಸುವುದಕ್ಕೆ ಆಗದ್ದೇ ರೈತರು ಭಿಕ್ಷಿಯನ್ನು ಬೆಳೆಯುವುದಕ್ಕೂ ತೊಂದರೆಯಾಗದೆ. ಅಂಥವರ ಬಗ್ಗೆ ಸರ್ಕಾರ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಜನಪರವಾದ ಕ್ರಮವನ್ನು ಸರ್ಕಾರ ತೆಗೆದುಕೊಂಡಿಲ್ಲ. ನಮ್ಮ ಊರಿನಲ್ಲಿ ಒಂದು ಡಿಸ್ಟಿಲರಿ ಇದೆ. ತಾವು ಅದನ್ನು ನೋಡಬೇಕು. ಹಿರಿಯೂರಿನಲ್ಲಿ ಇರುವಂಥ ಈ ಒಂದು ಡಿಸ್ಟಿಲರಿಯಿಂದ ಕೊಳಚೆ ನೀರು ಬರುತ್ತದೆ. ನೀವು ಸಾಯಂಕಾಲ ಅಲ್ಲಿದ್ದರೆ ಗೊತ್ತಾಗುತ್ತದೆ, ಸುತ್ತ ಐದು ಮೈಲಿಯಲ್ಲಿ ಕೆಟ್ಟ ವಾಸನೆ ಬರುತ್ತಿರುತ್ತದೆ. ಇದು ಕ್ಷೇತ್ರದ ಜಲ ಮಾಲಿನ್ಯ ಮಾತ್ರವಲ್ಲ, ವಾಯು ಮಾಲಿನ್ಯ ಕೂಡ ಆಗುತ್ತದೆ. ಇಂಥ ಒಂದು ಪರಿಸ್ಥಿತಿಯನ್ನು ಸರ್ಕಾರದ ಗಮನಕ್ಕೆ ತಂದಾಗ, ಹಲವಾರು ವರ್ಷಗಳಿಂದ ಹೋರಾಟ ಮಾಡುತ್ತಿದ್ದರೂ ಕೂಡ, ಅದರ ಬಗ್ಗೆ ಯಾವುದೇ ತೀರ್ಮಾನವನ್ನು ತೆಗೆದುಕೊಳ್ಳವಂತಹ ತಾಕತ್ತು ಯಾವುದೇ ಸರ್ಕಾರಕ್ಕೂ ಬರಲಿಲ್ಲ.

(ಶ್ರೀ ಬಸವರಾಜ ಪಾಟೀಲ್ ಅಟ್ಟೂರ್‌ರವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಈ ದೇಶದಲ್ಲಿರತಕ್ಕಂಥ ಕಾನೂನು ಬಡವರ ಪರ ಇದ್ದರೂ ಸಹ ಅದು ಜನಸಾಮಾನ್ಯರ ಪರವಾಗಿ ಇದ್ದರೂ ಸಹಾ ಅದನ್ನು ಕಾರ್ಯರೂಪಕ್ಕೆ ತರುವಾಗ ಇರುವಂತ ನಿಷ್ಠೆ ಸರ್ಕಾರಕ್ಕೆ ಇಲ್ಲದಿರುವುದರಿಂದ ಈ ರೀತಿಯಾಗುತ್ತದೆ. ಈಗ ಉದಾಹರಣೆಗೆ ಹೇಳಿದೆ, ತಾವು ನೋಡಬಹುದು. ಹಿರಿಯೂರಿನಲ್ಲಿರುವಂಥ ಒಂದು ಡಿಸ್ಟಿಲರಿಯವರು ನೀರನ್ನು ಹೊರಗಡೆ ಬಿಡುತ್ತಿದ್ದಾರೆ. ತಾವು ಬಂದಿದ್ದರೆ ಯಾವಾಗಲಾದರೂ ನೋಡಬಹುದಿತ್ತು. ವಾಣಿ ವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆಯ ಮೂರು ಸಾವಿರ ತೆಂಗಿನ ಗಿಡಗಳನ್ನು ಈ ನೀರನ್ನು ಬಿಟ್ಟಿದ್ದರಿಂದ ಬೆಂಕಿ ಹೋಗಿದೆ, ಇದರ ಬಗ್ಗೆ ನಿಮಗೆ ಏನಾದರೂ ಕಳಕಳಿ ಇದೆಯೇ? ಇದನ್ನು ತಮ್ಮ ಗಮನಕ್ಕೆ ತಂದಿರಲಿಲ್ಲವೇ? ಹೋದ ಸಲ ವಿಧಾನಸಭೆಯಲ್ಲಿ ಚರ್ಚೆಯಾದ ಸಂದರ್ಭದಲ್ಲಿ ನಾನು ಈ ಮಾತನ್ನು ಗಮನಕ್ಕೆ ತಂದಿದ್ದೆ. ಇಲ್ಲಿ ನಮ್ಮ ನಮ್ಮ ಭಾಷಣ ಒಂದು ಅರಣ್ಯರೋದನವಾಗಿದೆ. ನಿಮಗೆ ಬಯ್ದರೆ ಅರ್ಥವಾಗುವುದಿಲ್ಲ ಅಥವಾ ಸುಮ್ಮನೆ ಇದ್ದರೆ ಇವರೆಲ್ಲಾ ಸರ್ಕಾರದವರ ಜೊತೆ ಶಾಮೀಲಾಗಿದ್ದಾರೆಂದು ಹೇಳುತ್ತಾರೆ. ಏನು ಮಾಡಬೇಕು ಮಾನ್ಯ ಬಸವಲಿಂಗಪ್ಪನವರೇ ನಾನು ಏತಕ್ಕೋಸ್ಕರ ಈ ಮಾತನ್ನು ಹೇಳುತ್ತಿದ್ದೇನೆಂದರೆ ನಿಮ್ಮ ಸರ್ಕಾರಕ್ಕೆ ಸಂಬಂಧಪಟ್ಟಂಥ ಇಲಾಖೆಯವರು ಏನಿದ್ದಾರೆ, ಇಲಾಖೆಯವರು ಈ ಕುಡಿಯುವ ನೀರು ಯೋಗ್ಯವಿಲ್ಲವೆಂಬ ಮಾತನ್ನು ಹೇಳಿದ್ದಾರೆ. ಈ ಭೂಮಿಗೆ ಕೊಳಚೆ ನೀರನ್ನು ಬಿಟ್ಟಿದ್ದರಿಂದ ಅದು ವ್ಯವಸಾಯಕ್ಕೆ ಯೋಗ್ಯವಾಗಿಲ್ಲ ಎಂಬ ಮಾತನ್ನು ಹೇಳಿದ್ದಾರೆ. ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದೀರಿ? ಏತಕ್ಕೋಸ್ಕರ ಕ್ರಮ ತೆಗೆದುಕೊಳ್ಳಲಿಲ್ಲ? ನಿಮಗೂ ಅವರಿಗೂ ಇರುವಂಥ ಸಂಬಂಧ ಏನು? ಇದು ಕೇವಲ ಒಂದು ಡಿಸ್ಟಿಲರಿ ಬಗ್ಗೆ ಮಾತ್ರ ಹೇಳುತ್ತಿಲ್ಲ, ಹರಿಹರದ ಒಂದು ಫಾಲಿಪೈಬರ್ ಕಾರ್ಖಾನೆ ಬಗ್ಗೆ ಹೇಳುತ್ತಿಲ್ಲ. ಈ ರಾಜ್ಯದಲ್ಲಿರತಕ್ಕಂಥ ಇಂಥ ಕೊಳಚೆಯನ್ನು ಉಂಟುಮಾಡತಕ್ಕಂಥ ಕಾರ್ಖಾನೆಗಳು ಏನಿವೆ, ಅವುಗಳ ಬಗ್ಗೆ ಯಾವುದೇ ನಿರ್ದಿಷ್ಟವಾದಂಥ ಕ್ರಮ ತೆಗೆದುಕೊಂಡಿಲ್ಲ. ಇವೊತ್ತಿನ ದಿವಸ ಅವರ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ತಮಗೆ ಈ ತಿದ್ದುಪಡಿಯಿಂದ ಅಧಿಕಾರ ಬರುದಿದೆ. ಇಂತಹ ಪರಿಣಾಮಕಾರಿಯಾದ ತಿದ್ದುಪಡಿಯನ್ನು ತಾವು ಜಾರಿಗೆತರಲಿಕ್ಕೆ ಮೂರು ವರ್ಷಗಳ ಅವಧಿಗೆ ನಾವು ಕಾಯಬೇಕಾಯಿತು. ಇದು ಸರಿಯಲ್ಲ. ಇನ್ನು ಮೇಲಾದರೂ ಸಹ ಈ ಒಂದು ತಿದ್ದುಪಡಿ ಮುಖಾಂತರ ಸಂಬಂಧಪಟ್ಟವರಿಗೆ

ತಾವು ಸೂಚನೆ ಕೊಡಬೇಕು. ಈ ತಿದ್ದುಪಡಿ ಮುಖಾಂತರ ನಿಮಗೆ ಅಧಿಕಾರ ಬರುತ್ತದೆ. ಮೊದಲು ಏನಿತ್ತು ಎಂದರೆ, ಪೊಲ್ಯೂಷನ್ ಕಂಟ್ರೋಲ್ ಬೋರ್ಡ್‌ನವರು ಸರ್ಕಾರವನ್ನು ಕೇಳುತ್ತಿರಲಿಲ್ಲ. ಯಾವುದೇ ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡಬೇಕಾದರೆ, ಅವರು ಮಾಡಿದ ನಂತರ ಅಲ್ಲೇನಾದರೂ ಆದರೆ ಆಮೇಲೆ ಸರ್ಕಾರವನ್ನು ಕೇಳುತ್ತಿದ್ದರು. ಈಗ ಸ್ಥಾಪನೆ ಮಾಡಿಸುವುದಕ್ಕಿಂತ ಮುಂಚೆ ಸಂಬಂಧಪಟ್ಟವರ ಅನುಮತಿ ಪಡೆಯಬೇಕೆಂಬ ತಿದ್ದುಪಡಿಯನ್ನು ತಂದಿದ್ದೀರಿ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಅಷ್ಟೇ ಅಲ್ಲ, ಆ ತಿದ್ದುಪಡಿ ಪ್ರಕಾರ ತಮಗೆ ಒಂದು ಸಾರಿ ಕೊಟ್ಟರೆ ಇವರಿಗೆ ಬದಲಾಯಿಸಲಿಕ್ಕೆ ಅಧಿಕಾರ ಇಲ್ಲದ ಹಾಗೆ ಇಲ್ಲ. ಇವ್ಹೊತ್ತಿನ ದಿವಸ ನಿಗಧಿತವಾದ ಅವಧಿಗೆ ಒಂದು ವರ್ಷ, ಎರಡು ವರ್ಷಕ್ಕೆ ಕೊಡುವ ಅಧಿಕಾರ ತಮಗಿದೆ. ಅಪ್ಪರೊಳಗೆ ಕೊಳಚೆ ನೀರನ್ನು ಅಥವಾ ಜಲ ಮಾಲಿನ್ಯವನ್ನು ತಪ್ಪಿಸಲಿಕ್ಕೆ ಯೋಗ್ಯವಾದಂಥ ಕ್ರಮಗಳನ್ನು ತೆಗೆದುಕೊಳ್ಳಲಿಕ್ಕೆ ತಾವು ಸೂಚನೆ ಕೊಡಬಹುದು. ಒಂದು ಪಕ್ಷ ಆ ಸೂಚನೆಗೆ ವಿರುದ್ಧವಾಗಿ ಅವರು ಏನಾದರೂ ಮಾಡಿದರೆ ಅಥವಾ ಆ ಸೂಚನೆಗಳನ್ನು ಅಂಗೀಕಾರ ಮಾಡಲಿಕ್ಕೆ ಏನೂ ಕ್ರಮ ತೆಗೆದುಕೊಳ್ಳದಿದ್ದರೆ, ತಾವು ಸಂಬಂಧಪಟ್ಟಂಥ ಕೈಗಾರಿಕೆಯನ್ನು ನಿಲ್ಲಿಸಲು ಅಧಿಕಾರವಿದೆ. ಅದನ್ನು ತಾವು ಚಲಾಯಿಸಬೇಕು. ಆದರೆ, ನಾನು ತಮಗೆ ಕೇಳುತ್ತಿದ್ದೇನೆ. ಇಲ್ಲಿಯವರೆಗೂ ಸಹಾ ಎಷ್ಟು ಪ್ರಕರಣಗಳ ಬಗ್ಗೆ ತಾವು ಈ ಅಧಿಕಾರವನ್ನು ಚಲಾಯಿಸಿದ್ದೀರಿ? ಎಷ್ಟು ಕಾರ್ಖಾನೆಗಳನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಿದ್ದೀರಿ? ಪರಿಸರ ಮಾಲಿನ್ಯದಿಂದ ಅಥವಾ ಜಲ ಮಾಲಿನ್ಯದಿಂದ ಅಥವಾ ವಾಯು ಮಾಲಿನ್ಯದಿಂದ ತೊಂದರೆಗೆ ಒಳಗಾದವರಿಗೆ ತಾವು ಯಾವ ಒಂದು ಪರಿಹಾರ ಕೊಟ್ಟಿದ್ದೀರಿ? ಇವ್ಹೊತ್ತಿನ ದಿವಸ ತಮಗೆ ಒಂದು ಅಧಿಕಾರ ಇದೆ. ಯಾರು ಇದಕ್ಕೆ ಕಾರಣರಾಗಿದ್ದಾರೆ, ಅವರಿಗೆ ಶಿಕ್ಷೆ ಕೊಡುವಂಥ ಅಧಿಕಾರ ಮಾತ್ರ ಇದೆ. ಆದರೆ, ಇನ್ನೂ ಒಂದು ಹೆಜ್ಜೆ ತಾವು ಮುಂದೆ ಹೋಗಬೇಕಾಗುತ್ತದೆ. ಕೇವಲ ಈ ಮಾಲಿನ್ಯಕ್ಕೆ ಕಾರಣವಾದವರನ್ನು ತಾವು ಕಂಡುಹಿಡಿದು, ಪತ್ತೆ ಮಾಡಿ ಶಿಕ್ಷೆ ಕೊಡುವುದು ಮಾತ್ರ ಮುಖ್ಯವಲ್ಲ, ಅದರ ಜೊತೆಯಲ್ಲಿಯೇ ಈ ಜಲ ಮಾಲಿನ್ಯದಿಂದಾಗಿ ಅಥವಾ ವಾಯು ಮಾಲಿನ್ಯದಿಂದಾಗಿ ಯಾರು ತೊಂದರೆಗೆ ಒಳಗಾಗಿದ್ದಾರೆ ಅವರಿಗೆ ಸಂಬಂಧಪಟ್ಟವರಿಂದ ವಸೂಲಿ ಮಾಡಿ ಪರಿಹಾರವನ್ನು ಕೊಡುವಂಥ ಕೆಲಸವನ್ನು ಮಾಡಬೇಕಾಗುತ್ತದೆ.

ಮಹಾರಾಷ್ಟ್ರದಲ್ಲಿ ಹಿಂದೆ ಪೊಲ್ಯೂಷನ್ ಕಂಟ್ರೋಲ್ ಬೋರ್ಡ್ ಅಧ್ಯಕ್ಷರಾಗಿದ್ದಂಥವರು ಒಂದು ವಿಶೇಷವಾದ ವರದಿಯನ್ನು ಕೊಟ್ಟಿದ್ದಾರೆ. ಅವರು ಅನೇಕ ವಿಧವಾದ ಶಿಫಾರಸ್ಸುಗಳನ್ನು ಮಾಡಿದ್ದಾರೆ. ಆದರೆ ದುರದೃಷ್ಟವಶಾತ್, ಕೇಂದ್ರದಲ್ಲಿ ಅಧನಿಯಮ ಹೊಂದಿಸುವಲ್ಲಿ ಈ ಶಿಫಾರಸ್ಸುಗಳನ್ನು ಪರಿಗಣನೆಗೆ ಪೂರ್ಣವಾಗಿ ತೆಗೆದುಕೊಂಡಿಲ್ಲದಿರುವುದರಿಂದ ಇವ್ಹೊತ್ತು ಸಹಾ ತೀವ್ರವಾದಂಥ ತಿದ್ದುಪಡಿಗಳನ್ನು ತರುವುದು ಅವಶ್ಯಕತೆ ಇದೆ. ಅದರ ಬಗ್ಗೆ ತಾವು ಆಲೋಚನೆ ಮಾಡಬೇಕು ಮತ್ತು ಕೇಂದ್ರ ಸರ್ಕಾರದ ಜೊತೆ ತಾವು ವ್ಯವಹರಿಸಿ ಕ್ರಮ ತೆಗೆದುಕೊಳ್ಳಬೇಕೆಂಬ ಮಾತನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಹಿಂದೆ ಜಲ ಮಾಲಿನ್ಯ ಕಾಯಿದೆಯಲ್ಲಿ ಶಿಕ್ಷೆ ಇತ್ತು, ಅದು ಬಹಳ ಕಡಿಮೆ ಇತ್ತು. ಇವ್ಹೊತ್ತಿನ ದಿವಸ ಏರ್ ಪೊಲ್ಯೂಷನ್ ಆಕ್ಟ್ ಪ್ರಕಾರಸ ಏನು ಒಂದು ವಿಶೇಷವಾದಂಥ ಪ ಶಿಕ್ಷೆ ಕೊಡಬಹುದು ಅಂಥ ಶಿಕ್ಷೆಯನ್ನು ಇವ್ಹೊತ್ತಿನ ದಿವಸ ಕೊಡುವುದಕ್ಕೆ ತಾವು ಇದರಲ್ಲಿ ನಿಗಧಿಗೊಳಿಸಿದ್ದೀರಿ. ಆದರು ಸಹ ಅತ್ಯಂತ ಅವಶ್ಯವೆಂದು ನಾನು

ಭಾವಿಸಿದ್ದೇನೆ. ಮತ್ತು ಸರ್ಕಾರ ಏನೂ ಮಾಡುವುದಿಲ್ಲವೆಂದು ಇಲ್ಲಿಯವರೆಗೂ ಕಾಯಲಾಗಿತ್ತು. ಇಲ್ಲಿಯವರೆಗೂ ನಾವು ನೋಡುತ್ತಿದ್ದೇವೆ, ಒಂದು ಪಕ್ಷ ಸರ್ಕಾರಕ್ಕೆ ದೂರು ಕೊಟ್ಟರೆ ಸರ್ಕಾರದವರು ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುತ್ತಿರಲಿಲ್ಲ ಅಥವಾ ಪ್ರವೃತ್ತಿ ಬಹಳ ಕಡಿಮೆ ಇತ್ತು. ಆದರೆ, ಇವೊತ್ತು ಸಾರ್ವಜನಿಕರು ಅಥವಾ ಸಂಘ-ಸಂಸ್ಥೆಗಳು ಏನಿವೆ, ಅವರು ಪೊಲ್ಯೂಷನ್ ಕಂಟ್ರೋಲ್ ಬೋರ್ಡ್‌ನವರಿಗೆ ಆರವತ್ತು ದಿವಸಗಳ ಒಂದು ವಾಯಿದೆಯ ನೋಟೀಸ್ ಕೊಟ್ಟು ಕ್ರಮವನ್ನು ತೆಗೆದುಕೊಳ್ಳುವ ಅಧಿಕಾರವನ್ನು ತಾವು ಈ ತಿದ್ದುಪಡಿ ಮುಖಾಂತರ ತಂದಿದ್ದೀರಿ. ಇದು ಖಂಡಿತವಾಗಲೂ ಅತ್ಯಂತ ಒಳ್ಳೆಯ ತಿದ್ದುಪಡಿಯೆಂಬ ಮಾತನ್ನು ಹೇಳುತ್ತೇನೆ. ಈ ದೇಶದಲ್ಲಿ ಕೇವಲ ಸರ್ಕಾರಗಳಿಂದ ಎನೂ ಮಾಡಲಿಕ್ಕಾಗುವುದಿಲ್ಲ. ಅದಕ್ಕಿಂತ ಹೆಚ್ಚಾಗಿ ಸಂಘ-ಸಂಸ್ಥೆಗಳು ಏನಿವೆ, ಸಾರ್ವಜನಿಕರು ಏನು ಇದ್ದಾರೆ ಅದರ ಬಗ್ಗೆ ಜಾಗ್ರತಗೊಂಡು ಅವರೂ ಸಹಾ ಬೇಕಾದಂಥ ಸಹಾಯ-ಸಹಕಾರಗಳನ್ನು ಸರ್ಕಾರಕ್ಕೆ ಕೊಡಬೇಕಾಗುತ್ತದೆ. ದುರದೃಷ್ಟವಶಾತ್, ಇವೊತ್ತಿನ ದಿವಸ ಪೊಲ್ಯೂಷನ್ ಕಂಟ್ರೋಲ್ ಬೋರ್ಡ್‌ಗಳು ಏನಿವೆ ಇವುಗಳಿಗೆ ಸಾಕಷ್ಟು ಹಣಕಾಸಿನ ನೆರವು ಇಲ್ಲ.

16 ರಾಜ್ಯಗಳಿಗೆ ಎರಡು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈವತ್ತಿನ ದಿವಸ ಅದರ ಆದಾಯವನ್ನು ಹಚ್ಚಿಸಿಕೊಳ್ಳಲು ಬೇರೆ ಬೇರೆ ಮಾರ್ಗಗಳನ್ನು ಕಲ್ಪಿಸಿಕೊಡುವುದಕ್ಕೋಸ್ಕರ ಈ ಒಂದು ತಿದ್ದುಪಡಿ ಅಧಿನಿಯಮದಲ್ಲಿ ತಾವು ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಅದು ಅತ್ಯಂತ ಅವಶ್ಯಕವೆನ್ನುವ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಎಲ್ಲಕ್ಕಿಂತ ಹೆಚ್ಚಾಗಿ ಸರ್ಕಾರದವರು ಕೊಟ್ಟಂತಹ ಸೂಚನೆ ಏನು ಇದೆ, ಆ ಸೂಚನೆಯ ಮೇರೆಗೆ ಅವರು ಈ ಜಲಮಾಲಿನ್ಯವನ್ನು ತಡೆಗಟ್ಟಲು ಕ್ರಮತೆಗೆದುಕೊಳ್ಳದಿದ್ದರೆ, ತಾವು ನೀರನ್ನು ಮತ್ತು ವಿದ್ಯುತ್ತ್ನನ್ನು ನಿಲ್ಲಿಸಲು ತಮಗೆ ಅಧಿಕಾರವಿದೆ. ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಈ ತಿದ್ದುಪಡಿ ಜಾರಿಗೆ ಬಂದಮೇಲಾದರೂ ಸಹ ಇದರ ಬಗ್ಗೆ ತಾವು ತೀವ್ರವಾದ ಗಮನಹರಿಸಿ ಸಂಬಂಧಪಟ್ಟವರು ಯಾರು ಇದ್ದಾರೆ ಜಲಮಾಲಿನ್ಯಕ್ಕೆ ವಾಯುಮಾಲಿನ್ಯಕ್ಕೆ ಯಾರು ಕಾರಣಕರ್ತರು ಯಾರಿದ್ದಾರೆ ಅವರ ಮೇಲೆ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳಲು ತಾವು ಪ್ರಯತ್ನ ಮಾಡಬೇಕನ್ನುವ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಬಿ. ಬಸವಲಿಂಗಪ್ಪ (ವಿಜ್ಞಾನ. ತಂತ್ರಜ್ಞಾನ ಮತ್ತು ಪರಿಸರ ಸಚಿವರು) : ಉಪ ಸಭಾಧ್ಯಕ್ಷಣಿಯವರೇ, ಈ ಒಂದು ಶಾಸನಾತ್ಮಕ ನಿರ್ಣಯದ ಬಗ್ಗೆ ಸಾಕಷ್ಟು ಚರ್ಚೆ ನಡೆದಿದೆ. ಆಗಬೇಕಾಗಿತ್ತು. ಜಾಸ್ತಿಯಾಗಿಲ್ಲ. ಮಾನ್ಯ ಏಕಾಂತಯ್ಯನವರು ತಮ್ಮ ಭಾಷಣದಲ್ಲಿ ನಾನು ಮಾಡತಕ್ಕ ಕೆಲಸವನ್ನು ಸುಲಭರೀತಿಯಲ್ಲಿ ಭಾಷಣ ಮಾಡಿದ್ದಾರೆ. ಅವರಿಗೆ ನನ್ನ ಧನ್ಯವಾದಗಳು. ಆಮೇಲೆ ಅವರು ಹೇಳಿದ ಟೀಕೆಗಳೆಲ್ಲಾ ನಿಜ. ಇದುವರೆಗೂ ಸರ್ಕಾರ ಜಾಗ್ರತೆಯಿಂದ ಮತ್ತು ಜವಾಬ್ದಾರಿಯಿಂದ ಕೆಲಸ ಮಾಡಿಲ್ಲವೆನ್ನುವುದನ್ನು ಒಪ್ಪಲೇ ಬೇಕು. ಈ ಜಲಮಾಲಿನ್ಯವನ್ನು ಉಂಟುಮಾಡತಕ್ಕ ಸುಮಾರು 6 ಸಾವಿರ ಕಾರ್ಖಾನೆಗಳು ನಮ್ಮ ಕರ್ನಾಟಕದಲ್ಲಿ ಇವೆ. ಸುಮಾರು ಒಂದೂವರೆಲಕ್ಷ ಕಾರ್ಖಾನೆಗಳಲ್ಲಿ ಜಲಮಾಲಿನ್ಯ ಮಾಡತಕ್ಕವು ಸುಮಾರು 6 ಸಾವಿರ ಕಾರ್ಖಾನೆಗಳಿವೆ. ಇದರ ಬಗ್ಗೆ ನೀವು ಏನು ಕಾರ್ಯಕ್ರಮ ತೆಗೆದುಕೊಂಡಿರುವುದರ ಬಗ್ಗೆ ನಾನು ಶ್ರೀ ಏಕಾಂತಯ್ಯನವರ ಜೊತೆಗೆ ಧ್ವನಿಗೂಡಿಸಿ ಒಪ್ಪಬೇಕಾಗುತ್ತದೆ. ಸಾಕಷ್ಟು ನಾವು ಕೆಲಸ ಮಾಡಿಲ್ಲ.

ಸರ್ಕಾರದವರು ಆ ಕಡೆ ಜಾಸ್ತಿ ಗಮನಕೊಟ್ಟಿಲ್ಲ. ಇದನ್ನು ತಡೆಗಟ್ಟಲು ಏನು ಮಂಡಳಿ ಇದೆ, ಆ ಮಂಡಳಿಯಲ್ಲಿ ಯಾರು ಯಾರಿಗೆ ಅವಕಾಶವಿಲ್ಲವೋ, ಪರಿಣತಿ ಇಲ್ಲವೋ ಅಂತವರನ್ನು ನಾವು ಹಾಕಿಕೊಂಡಿದ್ದೇವೆ. ಇದು ಹೇಗೋ ಒಂದು ರೀತಿ ಪಿಂಜರಾಪೋಲ್ ತರಹ ಇದೆ. ಅದಕ್ಕೋಸ್ಕರ ಕೆಲಸ ಮಾಡಿಲ್ಲವೆಂಬ ಈ ದೂರಿಗೆ ಹೇಗೆ ಉತ್ತರ ಯಾವ ರೀತಿಯಾಗಿ ಕೋಡುವುದು? ಅಂತವರನ್ನು ಹಾಕಿದ್ದೇವೆ. ಅವರು ತಮ್ಮ ಯೋಗ್ಯತೆಗೆ ತಕ್ಕಹಾಗೆ ಕೆಲಸ ಮಾಡಿದ್ದಾರೆ. ಆದರೆ ನಾನು ಈವತ್ತು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇನ್ನು ಮೇಲೆ ಸರ್ಕಾರ ಒಂದು ದೃಢವಾಜ ನಿಲುವನ್ನು ತೆಗೆದುಕೊಂಡಿದೆ ಮತ್ತು ಜಲಮಾಲಿನ್ಯದ ಬಗ್ಗೆ, ಪರಿಸರ ಮಾಲಿನ್ಯದ ಬಗ್ಗೆ ಗಾಳಿ ಮಾಲಿನ್ಯದ ಬಗ್ಗೆ ಸಾಕಷ್ಟು ಸರ್ಕಾರ ಹುಕಂಗಳನ್ನು ಜಾರಿಗೊಳಿಸಿದ್ದೇವೆ. ಪ್ರತಿ ಶಾಸಕ ಸದಸ್ಯರಿಗೂ ಕೂಡ ನಾನು ಅದರ ನಕಲುಗಳನ್ನು ಕಳುಹಿಸುತ್ತೇನೆ ಮತ್ತು ಈ ಆಕ್ಟ್ ಅನ್ನು ಕೂಡ ಕಳುಹಿಸಿಕೊಡುತ್ತೇನೆ. ಕಾರಣವೇನೆಂದರೆ, ಯಾರಾದರೂ ಕೂಡ ಈ ತಿದ್ದುಪಡಿ ಪ್ರಕಾರ ದೂರನ್ನು ಕೊಡಬಹುದು. ಪೋಲೀಸರು ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಲೇಬೇಕು. ಈಗ ಮುನಿಸಿಪಾಲಿಟಿಯಲ್ಲಿ ಕಮಿಷನರ್ ಇರುತ್ತಾರೆ, ಸಾರಿಗೆ ಇಲಾಖೆಯಲ್ಲಿ ಕಮಿಷನರ್ ಇರುತ್ತಾರೆ. ಯಾರ್ಯಾರು ಈ ಆಕ್ಟ್‌ನ ಅಡಿಯಲ್ಲಿ ಕ್ರಮತೆಗೆದುಕೊಳ್ಳುವುದಿಲ್ಲವೋ ಅಂತವರ ಮೇಲೆ ಕೂಡ ಕ್ರಮತೆಗೆದುಕೊಳ್ಳಲು ಇದರಲ್ಲಿ ಅವಕಾಶ ಉಂಟು. ಆದುದರಿಂದ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಸರ್ಕಾರದಲ್ಲಿರತಕ್ಕ ಪ್ರತಿಯೊಬ್ಬ ಅಧಿಕಾರಿಯೂ ಕೂಡ ಬಹಳ ಜವಾಬ್ದಾರಿಯಿಂದ ಕೆಲಸ ಮಾಡುತ್ತಾರೆಂದು ನನ್ನ ನಿರೀಕ್ಷಣೆ ಇದೆ. ಇದರಲ್ಲಿ ಈ ಒಂದು ಜಲಮಾಲಿನ್ಯವಾಗಲಿ ಅಥವಾ ಗಾಳಿ ಮಾಲಿನ್ಯವಾಗಲಿ, ಧ್ವನಿ ಮಾಲಿನ್ಯವಾಗಲಿ, ಪರಿಸರಮಾಲಿನ್ಯವಾಗಲಿ, ಇವುಗಳನ್ನು ನಾವು ಸುರಕ್ಷಿತವಾಗಿ ಕಾಪಾಡಿಕೊಂಡು ಬಂದರೆ ಎಲ್ಲರಿಗೂ ಯೋಗಕ್ಷೇಮವಿರುತ್ತದೆ, ಎಲ್ಲರಿಗೂ ಕೂಡ ಆರೋಗ್ಯವಿರುತ್ತದೆ. ಈ ಸಮಾಜವನ್ನು ಇನ್ನು ಜಾಸ್ತಿಯಾಗಿ ಬೆಳೆದುಕೊಂಡು ಹೋಗಬಹುದು. ಕೆಲವರು ಸಂಶಯ ಪಡುತ್ತಿದ್ದಾರೆ. ಮುಂದಿನ 10, 15, 20 ವರ್ಷದಲ್ಲಿ ಇದೇ ರೀತಿ ನಾವು ಮಾಲಿನ್ಯವನ್ನು ಮಾಡಿಕೊಳ್ಳುತ್ತಾ ಹೋದರೆ, ಜನಗಳ ಸುರಕ್ಷತೆ ಇರುವುದಲ್ಲ, ಆರೋಗ್ಯ ಅಷ್ಟಾಗಿ ಇರುವುದಿಲ್ಲ ಎಂದು ಸಂಶಯಪಡತಕ್ಕ ಒಂದು ವಿಷಯವಾಗಿದೆ. ಈಗ ಒಂದು ವಿಚಾರವನ್ನು ತಮಗೆ ಹೇಳುತ್ತೇನೆ.

ಈ ಪರಿಸರದ ಬಗ್ಗೆ ಅಂತರರಾಷ್ಟ್ರೀಕರಣ ಮಾಡಬೇಕು. ಅಂತರರಾಷ್ಟ್ರೀಯ ಮಟ್ಟದಲ್ಲಿ ನಿಯಂತ್ರಿಸಬೇಕು ಎನ್ನುವಂತಹ ಭಾವನೆಗಳು ಈವತ್ತು ಉದ್ಭವಿಸಿವೆ. ಅದರ ಬಗ್ಗೆ ನಾವು ಸಾಕಷ್ಟು ಗಮನ ಕೊಡುತ್ತಿದ್ದೇವೆ. ಈವತ್ತು ನಾನು ಒಂದು ಭರವಸೆಕೊಡುತ್ತಿದ್ದೇನೆ. ಏನು ನಾವು ಸರ್ಕಾರದ ವತಿಯಿಂದ ಮಾಡಿಲ್ಲ, ಮಂಡಲಿವತಿಯಿಂದ ಮಾಡಿಲ್ಲ, ಅದನ್ನು ಇನ್ನುಮೇಲೆ ನಾವು ಕಟ್ಟುನಿಟ್ಟಾಗಿ ಮಾಡುತ್ತೇವೆಂಬ ಭರವಸೆಯನ್ನು ಕೊಡುತ್ತೇನೆ. ಮಾನ್ಯ ಸದಸ್ಯರು ಈ ಮಸೂದೆಯನ್ನು ಅಂಗೀಕರಿಸಬೇಕೆಂದು ಕೇಳಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಛೇರ್‌ಮನ್ : ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿದ ಶಾಸನಾತ್ಮಕ ನಿರ್ಣಯವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾಪ ಏನೆಂದರೆ,

"ರಾಜ್ಯದಲ್ಲಿ ಜಲಮಾಲಿನ್ಯ ತಡೆಗಟ್ಟುವಿಕೆ ಹಾಗೂ ನಿಯಂತ್ರಣ ಮತ್ತು ಶುದ್ಧ ಜಲವನ್ನು ಯಥಾಸ್ಥಿತಿಯಲ್ಲಿಡುವ ಹಾಗೂ ಉಳಿಸಿಕೊಂಡು ಬರುವುದಕ್ಕೆ ಸಂಬಂಧಿಸಿದ ಜಲ (ಮಾಲಿನ್ಯ ನಿವಾರಣೆ ಹಾಗೂ ನಿಯಂತ್ರಣ) ಅಧಿನಿಯಮ, 1974 (ಕೇಂದ್ರ

ಅಧಿನಿಯಮ 6, 1974) ಕರ್ನಾಟಕ ರಾಜ್ಯದಲ್ಲಿ 23ನೇ ಮಾರ್ಚ್ 1974 ರಿಂದ ಜಾರಿಗೆ ಬಂದಿರುತ್ತದೆ.

ಹಾಗೂ ಈ ಕಾರಣದಿಂದ ಜಲ (ಮಾಲಿನ್ಯ ನಿವಾರಣೆ ಹಾಗೂ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ, 1974 (ಕೇಂದ್ರ ಅಧಿನಿಯಮ 44, 1978) ಇದನ್ನು ಸಹ ಕರ್ನಾಟಕ ರಾಜ್ಯ 13ನೇ ಫೆಬ್ರವರಿ 1982ರಲ್ಲಿ ಅಂಗೀಕರಿಸಿರುತ್ತದೆ.

ಹಾಗೂ ಮೇಲ್ಕಾಣಿಸಿದ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವಲ್ಲಿ ಕೆಲವು ಆಡಳಿತಾತ್ಮಕ ಹಾಗೂ ಕಾರ್ಯರೂಪದ ತೊಂದರೆಗಳ ಕಾರಣದಿಂದ ಸದರಿ ಅಧಿನಿಯಮಕ್ಕೆ ಕೆಲವು ತಿದ್ದುಪಡಿಗಳನ್ನು ಮಾಡುವ ಅಗತ್ಯತೆಯನ್ನು ಭಾರತ ಸರ್ಕಾರ ಪರಿಶೀಲಿಸುತ್ತದೆ.

ಹಾಗೂ ಈ ಕಾರಣದಿಂದ, ಆದರಂತೆ ಜಲ (ಮಾಲಿನ್ಯ ನಿವಾರಣೆ ಹಾಗೂ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ, 1988(ಕೇಂದ್ರ ಅಧಿನಿಯಮ 53, 1988)ವನ್ನು ಸಂಸತ್ತಿನಲ್ಲಿ ಅಂಗೀಕರಿಸಲಾಯಿತು ಹಾಗೂ ಸಂವಿಧಾನದ 252(1) ಹಾಗೂ (2)ನೇ ಅನುಚ್ಛೇದದ ಮೇರೆಗೆ ಒಂದು ನಿರ್ಣಯವನ್ನು ಅಂಗೀಕರಿಸುವ ಮೂಲಕ ತಿದ್ದುಪಡಿ ಅಧಿನಿಯಮವನ್ನು ಅಂಗೀಕರಿಸಬೇಕೆಂದು ಭಾರತ ಸರ್ಕಾರ ರಾಜ್ಯ ಸರ್ಕಾರವನ್ನು ಕೋರಿರುತ್ತದೆ.

ಈಗ ಆದುದರಿಂದ ಸಂವಿಧಾನವು 252ನೇ ಅನುಚ್ಛೇದದ ಖಂಡಿಕೆ (2)ನ್ನು ಸೇರಿಸಿ ಓದಿಕೊಂಡಂತೆ ಸದರಿ ಅನುಚ್ಛೇದ ಖಂಡಿಕೆ (1)ನ್ನು ಅನುಸರಿಸಿ ಜಲ (ಮಾಲಿನ್ಯ ನಿವಾರಣೆ ಹಾಗೂ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ 1988(ಕೇಂದ್ರ ಅದಿನಿಯಮ 53,1988)ವನ್ನು ಕರ್ನಾಟಕ ರಾಜ್ಯ ಅಂಗೀಕರಿಸಬೇಕೆಂದು ಈ ವಿಧಾನ ಸಭೆಯು ಈ ಮೂಲಕ ನಿರ್ಣಯಿಸುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಶಾಸನಾತ್ಮಕ ನಿರ್ಣಯಕ್ಕೆ ಸಭೆಯ ಅನುಮೋದನೆ ದೊರಕಿತು.

ಶಾಸನ ರಚನಾ ಕಾರ್ಯಕಲಾಪಗಳು

1991ನೇ ಸಾಲಿನ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಲಿ ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಯೋಜನೆ ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಇಲಾಖೆಯ ಸಚಿವರು) : ಮಾನ್ಯ ಅಧ್ಯಕ್ಷರೆ, 1991ನೇ ಸಾಲಿನ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಲಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು : ಪ್ರಸ್ತಾಪವನ್ನು ಮಂಡಿಸಲಾಯಿತು.

+ ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, 1991ನೇ ಸಾಲಿನ ಮಲೆನಾಡು ಪ್ರದೇಶಾಭಿವೃದ್ಧಿಯ ಮಂಡಲ ವಿಧೇಯಕ 1991ನ್ನು ಹೃತ್ಪೂರ್ವಕರಾಗಿ ಸ್ವಾಗತಿಸುತ್ತೇನೆ. ಶ್ರೀಮತಿ ಮೋಟಮ್ಮನವರು ಅವರ ಜಾಗಕ್ಕೆ ಹೋಗಿ ಕುಳಿತುಕೊಂಡರೆ, ಮಲೆನಾಡು ಅಭಿವೃದ್ಧಿ ಬಗ್ಗೆ ನಾಲ್ಕು ಮಾತು